# ಬಿತ್ತನೆ ಪ್ರದೇಶಗಳು:

ವಾಣಿಜ್ಯ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಲು ಅಗತ್ಯವಾದ ಬಿತ್ತನೆ ಗೂಡುಗಳನ್ನು ಬೆಳೆಯಲು ಮೈಸೂರು ಬಿತ್ತನೆ ವಲಯ ಮತ್ತು ದ್ವಿತಳಿ ಬಿತ್ತನೆ ವಲಯಗಳು  ಕಾರ್ಯನಿರ್ವಹಿಸುತ್ತಿವೆ.

**ಮೈಸೂರು ಬಿತ್ತನೆ ವಲಯಗಳು:**

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿ ಒಳಗೊಂಡ ಪ್ರದೇಶವನ್ನು ಮೈಸೂರು ಬಿತ್ತನೆ ಪ್ರದೇಶವೆಂದು ಅಧಿಸೂಚಿಸಲಾಗಿದೆ. ಇಲ್ಲಿ ಶುದ್ಧ ಮೈಸೂರು ತಳಿ ಬಿತ್ತನೆ ಗೂಡುಗಳನ್ನು ಉತ್ಪಾದಿಸಲಾಗುತ್ತಿದೆ.

ಈ ಬಿತ್ತನೆ ಪ್ರದೇಶದ ರೈತರು ಉತ್ಪಾದಿಸಿದ ಬಿತ್ತನೆ ಗೂಡುಗಳು ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾದ ಸಂದರ್ಭದಲ್ಲಿ ಅಂತಹ ಪ್ರತಿ ಕೆ.ಜಿ.ಬಿತ್ತನೆ ಗೂಡಿಗೆ ಪ್ರಸ್ತುತ ರೂ 175 ರಂತೆ ಬೋನಸ್ ನೀಡಲಾಗುವುದು ಹಾಗೂ ಉತ್ಪಾದಕತೆ ಆಧಾರದ ಮೇಲೆ ಪ್ರತಿ ಕೆ.ಜಿ ಬಿತ್ತನೆ ಗೂಡಿಗೆ ರೂ 70/- ಪ್ರೋತ್ಸಾಹಧನ ನೀಡಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ವಿತರಿಸಿರುವ ಬೋನಸ್ ಹಾಗೂ ಪ್ರೋತ್ಸಾಹಧನದ ವಿವರಗಳು ಈ ಕೆಳಕಂಡಂತಿವೆ

**ಮೈಸೂರು ಬಿತ್ತನೆ ವಲಯದ ಪ್ರಗತಿ ವರದಿ**

| ಕ್ರ ಸಂ | ವರ್ಷ | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್) | ಕಟಾವು ಮಾಡಿದ ಮೊಟ್ಟೆಗಳು (ಲಕ್ಷಗಳಲ್ಲಿ) | ಉತ್ಪಾದಿಸಿದ ಗೂಡು (ಮೆ.ಟನ್) | ಗೂಡಿನ ವಿಲೇವಾರಿ | | 100 ಮೊಟ್ಟೆಗಳ ಸರಾಸರಿ ಇಳುವರಿ | ಪಾವತಿಸಿದ ಬೋನಸ್ (ಲಕ್ಷ ರೂ) |
|---|---|---|---|---|---|---|---|---|
| | | | | | ಬಿತ್ತನೆಗೆ | ರೀಲಿಂಗ್ | | |
| 1 | 2014-15 | 1167.64 | 17.800 | 655.069 | 4003.00 | 1759.00 | 32390 | 279.090 |
| 2 | 2015-16 | 1202.70 | 19.170 | 746.730 | 3853.24 | 2518.18 | 33239 | 411.890 |
| 3 | 2016-17 | 1234.28 | 18.475 | 702.988 | 3461.74 | 2425.23 | 31864 | 341.831 |
| 4 | 2017-18 | 1231.95 | 18.050 | 651.947 | 3842.31 | 1812.69 | 31330 | 399.934 |
| 5 | 2018-19 | 1238.38 | 19.258 | 814.530 | 3762.11 | 3125.15 | 35763 | 590.575 |

## ದ್ವಿತಳಿ ಬಿತ್ತನೆ ವಲಯ

ರಾಜ್ಯದ 31 ತಾಲ್ಲೂಕುಗಳಲ್ಲಿ ದ್ವಿತಳಿ ಬಿತ್ತನೆ ಗೂಡಿನ ಉತ್ಪಾದನೆ ಕೈಗೊಳ್ಳಲಾಗಿದೆ. ಬಹುಪಾಲು ತಾಲ್ಲೂಕುಗಳು ಪಶ್ಚಿಮಘಟ್ಟ ಪ್ರದೇಶದಲ್ಲಿದೆ. ಹಾಸನ, ಆನೇಕಲ್, ಕೆ.ಆರ್.ಪೇಟೆ ಮತ್ತು ತುಮಕೂರು ಬಿತ್ತನೆ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಬಿತ್ತನೆ ಗೂಡುಗಳು ಉತ್ಪಾದನೆಯಾಗುತ್ತಿದೆ. ಈ ಬಿತ್ತನೆ ಪ್ರದೇಶಗಳಲ್ಲಿ ಹೆಚ್ಚಾಗಿ ಸಿ.ಎಸ್.ಆರ್-2 ತಳಿಯ ಮೊಟ್ಟೆಗಳ ಸಾಕಾಣಿಕೆ ಮಾಡಲಾಗುತ್ತಿದೆ. ಕಳೆದ 5 ವರ್ಷಗಳ ಪ್ರಗತಿ ವರದಿ ಕೆಳಕಂಡಂತಿದೆ. ದ್ವಿತಳಿ ಬಿತ್ತನೆ ಪ್ರದೇಶದಲ್ಲೂ ಬಿತ್ತನೆಗೆ ಉತ್ಪಾದಿಸುವ ಪ್ರತಿ ಕೆ.ಜಿ. ಗೂಡು, ಬಿತ್ತನೆಗೆ ಯೋಗ್ಯವಾಗಿದ್ದು  ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದ ಸಂದರ್ಭದಲ್ಲಿ ಪ್ರತಿ ಕೆ.ಜಿ ಬಿತ್ತನೆ ಗೂಡಿಗೆ ಬೋನಸ್ ರೂ 175 ನೀಡಲಾಗುತ್ತಿದೆ. ಅಲ್ಲದೆ ಉತ್ಪಾದಕತೆ ಆಧರಿಸಿ ಪ್ರತಿ ಕೆ.ಜಿ.ಗೆ ರೂ 70 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

| ಕ್ರ ಸಂ | ವರ್ಷ | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್) | ಕಟಾವು ಮಾಡಿದ ಮೊಟ್ಟೆಗಳು (ಲಕ್ಷಗಳಲ್ಲಿ) | ಉತ್ಪಾದಿಸಿದ ಗೂಡು (ಮೆ.ಟನ್) | ಗೂಡಿನ ವಿಲೇವಾರಿ | | 100 ಮೊಟ್ಟೆಗಳ ಸರಾಸರಿ ಇಳುವರಿ | ಪಾವತಿಸಿದ ಪ್ರೋತ್ಸಾಹ ಧನ (ಲಕ್ಷ ರೂ) |
|---|---|---|---|---|---|---|---|---|
| | | | | | ಬಿತ್ತನೆಗೆ | ರೀಲಿಂಗ್ | | |
| 1 | 2014-15 | 2336.13 | 8.996 | 497.73 | 2275.125 | 960.097 | 35960 | 120.615 |
| 2 | 2015-16 | 2135.55 | 9.999 | 5588.25 | 2282.925 | 1345.678 | 36287 | 192.486 |
| 3 | 2016-17 | 2201.64 | 8.061 | 478.95 | 2113.864 | 999.285 | 37008 | 214.475 |
| 4 | 2017-18 | 2543.99 | 8.668 | 536.029 | 2433.02 | 1051.17 | 40196 | 228.265 |
| 5 | 2018-19 | 3146.85 | 8.602 | 519.206 | 2021.318 | 1353.318 | 39104 | 218.245 |

---------------------